

ಸಂಸ್ಥಾಪಕರಾದ ವಳ್ಳತೋಳ್ ನಾರಾಯಣ ಮೆನನ್ ಮತ್ತು ಪ್ರಾರಂಭಿಕ ಶಿಕ್ಷಕರು ಇಂತಹ ಪದ್ಧತಿಗಳಿರುವ ನೃತ್ಯವನ್ನು ಕೈಬಿಟ್ಟಿರಬಹುದು.

◆ **ಕೈಬಿಡಲಾದ ಅಂಶಗಳನ್ನು ಹೆಕ್ಕಿ, ಮತ್ತೆ ಮೋಹಿನಿಯಾಟ್ಟಂ ಪ್ರಸ್ತುತಿಗೆ ಸೇರಿಸಲು ಹೊರಟಾಗ ನಿಮ್ಮ ಮುಂದೆ ಇದ್ದ ಸವಾಲುಗಳು ಏನೇನು?**

'ಚಂದನಂ' ಅಥವಾ 'ಮುಕ್ಕುತ್ತಿ' ಪ್ರಸ್ತುತಿಯಲ್ಲಿ ಇಂತಹ ಆಚರಣೆಗಳಿದ್ದವು ಎನ್ನುವ ಮಾತ್ರಕ್ಕೆ ಆ ನೃತ್ಯವು ಮೂಲತಃ ಕೀಳುಮಟ್ಟದ್ದಾಗಿತ್ತು ಎಂದೇನಲ್ಲ. ಆಯಾ ಕಾಲದ ಸಾಮಾಜಿಕ ಸ್ಥಿತಿಗತಿಗಳು ಕಲೆಯ ಮೇಲೆ ಪ್ರಭಾವ ಬೀರುತ್ತಾ ಹೋಗುತ್ತವೆ. ನೃತ್ಯ ಪ್ರಸ್ತುತಿಯು ಬದಲಾವಣೆಯನ್ನು ಕಾಣುತ್ತದೆ. ನನ್ನ ಓದು ಮತ್ತು ಅಧ್ಯಯನವು ದೇಸೀ ನೃತ್ಯವು ಕೇರಳದ ಜಾನಪದ, ಆಚರಣಾತ್ಮಕ ಸಂಪ್ರದಾಯದ ಜೊತೆಗೆ ಸಂಪರ್ಕ ಹೊಂದಿರುವುದನ್ನು ತೋರಿಸಿಕೊಟ್ಟಿದೆ. ಉದಾಹರಣೆಗೆ, ಹಣೆಗೆ ಗಂಧ ಹಚ್ಚುವ ಪದ್ಧತಿಯು ದೇವಿ ಆರಾಧನೆಯ ಭಾಗವಾದ 'ಮುಡಿಯೇಟ್' ಮತ್ತು 'ತೆಯ್ಯಂ'ನಲ್ಲಿ ಈಗಲೂ ಆಚರಣೆಯಲ್ಲಿದೆ. ಮೋಹಿನಿಯಾಟ್ಟಂನಂತಹ ಸ್ತ್ರೀ ನೃತ್ಯ ಪ್ರಕಾರದ ಮೂಲ ಕೂಡ ಇವುಗಳಲ್ಲಿಯೇ ಇರಬಹುದಲ್ಲ. ದೇಸೀ ಪದ್ಧತಿಯ ಮೋಹಿನಿಯಾಟ್ಟಂನಲ್ಲಿ 'ಎಸಲ್' ಎಂಬ ಪ್ರಸ್ತುತಿಯಿದೆ. ಅದರಲ್ಲಿ ಲಕ್ಷ್ಮಿ ಕುರಿತು ಮತ್ತು ಪಾರ್ವತಿ ಕುರಿತಿಯ ನಡುವಿನ ವಾಗ್ವಾದ ಬಹಳ ಚೆನ್ನಾಗಿದೆ. 'ನಿನ್ನ ಗಂಡ ಶಿವನು ಚರ್ಮಕ್ಕೋಸ್ಕರ ಆನೆಯನ್ನು ಕೊಂದಿರಬೇಕು' ಎಂದು ಪಾರ್ವತಿಯನ್ನು ಲಕ್ಷ್ಮಿ ಹಂಗಿಸುತ್ತಾಳೆ. 'ನಿನ್ನ ಗಂಡ ವಿಷ್ಣು ದಂತಕ್ಕಾಗಿ ಆನೆಯನ್ನು ಕೊಂದಿರಬೇಕು ಬಿಡು...' ಎಂದು ಪಾರ್ವತಿ ಉತ್ತರಿಸುತ್ತಾಳೆ. ಈ ವಾದವು ಸಾಕಷ್ಟು ಮುಂದುವರೆದು, ಕೊನೆಗೆ ಅವರಿಬ್ಬರೂ ಸ್ನೇಹಿತೆಯರಾಗುವುದರೊಂದಿಗೆ ಮುಕ್ತಾಯವಾಗುತ್ತದೆ. ದೇವರನ್ನು ಮನುಷ್ಯರ ಭಾವನೆಗಳೊಂದಿಗೆ ಅನ್ವಯಿಸಿ ನೋಡುವ ಪದ್ಧತಿಯು ಜನಪದೀಯವಾದುದು. ಅವು ಪರೋಕ್ಷವಾಗಿ ಶೈವ ಮತ್ತು ವೈಷ್ಣವ ಆರಾಧನಾ ವಿಧಾನದ ಜಗಳಗಳನ್ನು ಕೂಡ ಹೇಳಬಹುದೇನೋ.

◆ **'ಮುಕ್ಕುತ್ತಿ' ನೃತ್ಯ ಪ್ರಸ್ತುತಿಯ ಬಗ್ಗೆ ಇದ್ದ ತಕರಾರೇನು?**

ಒಬ್ಬಳು ಸಾಮಾನ್ಯ ಹೆಂಗಸು ತನ್ನ ವಜ್ರದ ನತ್ತನ್ನು ಹುಡುಕುವ ಈ ಕೃತಿಯು ಮೇಲ್ನೋಟಕ್ಕೆ ಒಂದು